**ಇಂದು ದಿಃ 15-07-2023 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1, 3, 5 ರಿಂದ 7 ನೇ ಪ್ರತಿವಾದಿ ಪರಃ ಶ್ರೀ ಬಿ. ಎಚ್ ವಕೀಲರಿಂದಃ**

ಸಾಕ್ಷಿಗೆ ದಿನಾಂಕಃ16-06-2023 ರಂದು ಸಲ್ಲಿಸಿದ ವಕಾಲತ್ ನಾಮೆಯನ್ನು ತೋರಿಸಲಾಗಿ ಅದರ ಮೇಲೆ ಸಹಿ ಮಾಡಿದ್ದೇವೆ. ಆದರೆ ಯಾವ ದಿನಾಂಕದಂದು ಮಾಡಿದ್ದೇವೆಂದು ನನಗೆ ನೆನಪಿಲ್ಲ. ನಾನು ಈಗ ಆನಂದ ವಕೀಲರನ್ನು ನೇಮಕ ಮಾಡಿಕೊಂಡಿದ್ದೇನೆ. ನಾನು ಮತ್ತು 4 ನೇ ಪ್ರತಿವಾದಿ ಆನಂದ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರು ಆದ ನಂತರ, ದಾವಾ ಆಸ್ತಿಗಳಲ್ಲಿ ಭಾಗ ಕೊಡಿಸಬೇಕೆಂದು ವಕೀಲರ ಮೂಲಕ ತಕರಾರನ್ನು ಹಾಕಿದ್ದೇವೆ. ಆ ರೀತಿ ತಕರಾರು ಸಲ್ಲಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಂದೆಗೆ 4 ಜನ ಸಹೋದರರಿದ್ದಾರೆ. ಎಲ್ಲರಿಗಿಂತ ಹಿರಿಯ ಮಗ ಬಸಪ್ಪ ಎನ್ನುವವರಿದ್ದು, ಅವರು ನನಗೆ ದೊಡ್ಡಪ್ಪನಾಗಬೇಕು. ಕುಟುಂಬದ ಎಲ್ಲಾ ವ್ಯವಹಾರಗಳನ್ನು ಬಸಪ್ಪ ನೋಡಿಕೊಳ್ಳುತಿದ್ದರು ಎನ್ನುವುದು ಸರಿಯಲ್ಲ. ಮಲೇಶಪ್ಪ ಎನ್ನುವವರು ನೋಡಿಕೊಳ್ಳುತ್ತಿದ್ದರು. ಬಸಪ್ಪ ಕುಟುಂಬದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು ಎನ್ನುವುದು ಸರಿಯಲ್ಲ. ನಮ್ಮ ತಂದೆ ಮತ್ತು ಆತನ ಸಹೋದರರು 1986 ರಲ್ಲಿ ವಿಭಾಗ ಮಾಡಿಕೊಳ್ಳುವಾಗ ಎಲ್ಲರೂ ಜೀವಂತ ಇದ್ದರು. ವಿಭಾಗವಾದ ನಂತರ ನಮ್ಮ ತಂದೆ ಅವರ ಸಹೋದರರು ಅವರವರಿಗೆ ಬಂದ ಹಿಸ್ಸೆಗಳಲ್ಲಿ ಖಾತೆ, ಪಹಣಿ ಮಾಡಿಸಿಕೊಂಡಿದ್ದಾರೆಂದರೆ ಸರಿ. ನಮ್ಮ ತಂದೆಯ ಹೆಸರಿಗೆ ಬಂದ ಆಸ್ತಿಗಳು ಈಗಲೂ ನಮ್ಮ ತಂದೆಯ ಹೆಸರಿನಲ್ಲಿವೆ. ನಮ್ಮ ತಂದೆ 2013 ರಲ್ಲಿ ಮೃತಪಟ್ಟಿದ್ದಾರೆಂದರೆ ಸರಿ. ನಮ್ಮ ತಂದೆ ಮೃತಪಟ್ಟಾಗ ಅವರ ವಯಸ್ಸು ಅಂದಾಜು 75 ವರ್ಷ ವಯಸ್ಸಾಗಿತ್ತು. ನಮ್ಮ ತಂದೆಗೆ ಯಾವುದೇ ಅನಾರೋಗ್ಯ ಕಾಯಿಲೆಗಳು ಇರಲಿಲ್ಲ ಎಂದರೆ ಸಾಕ್ಷಿಯು, ನಮ್ಮ ತಂದೆಗೆ ದಮ್ಮು ಇತ್ತು ಹೇಳುತ್ತಾರೆ. ನಮ್ಮ ತಂದೆ ದಮ್ಮು ಕಾಯಿಲೆಗೆ ಚಿಕಿತ್ಸೆ ಪಡೆದು, ಆರೋಗ್ಯವಾಗಿದ್ದರು ಎಂದರೆ ಸರಿ. ನಮ್ಮ ತಂದೆ ಮೃತಪಡುವವರೆಗೆ ಆತನ ಹಿಸ್ಸೆಗೆ ಬಂದ ಆಸ್ತಿಗಳ ಮೇಲ್ವಿಚಾರಣೆಯನ್ನು ಆತನೇ ನೋಡಿಕೊಳ್ಳುತ್ತಿದ್ದ. ನಮ್ಮ ದೊಡ್ಡಪ್ಪ ಮತ್ತು ಚಿಕ್ಕಪ್ಪಂದಿರು ಅವರವರಿಗೆ ಬಂದ ಹಿಸ್ಸೆಗಳನ್ನು ಅವರೇ ನೋಡಿಕೊಳ್ಳುತ್ತಿದ್ದರೆಂದರೆ ಸರಿ. ಹನಗವಾಡಿ ಗ್ರಾಮದಲ್ಲಿ 2 ಮಾಳಿಗೆ ಮನೆಗಳಿದ್ದವು. ಎರಡೂ ಮನೆಗಳು ಒಂದಕ್ಕೊಂದು ಹೊಂದಿಕೊಂಡಿರುತ್ತವೆ. ಪಶ್ಚಿಮದ ಕಡೆಗೆ ಮುಖ ಮಾಡಿರುತ್ತವೆ. ಆ ಮನೆಯಲ್ಲಿ ಮಲ್ಲೇಶಪ್ಪ ಎನ್ನುವವರನ್ನು ಹೊರತುಪಡಿಸಿ, ಉಳಿದ 4 ಜನರಿಗೆ ಹಿಸ್ಸೆ ಬಂದಿದೆಂದರೆ ಸರಿ. ಮಲ್ಲೇಶಪ್ಪನಿಗೆ ಮನೆಯಲ್ಲಿ ಹಿಸ್ಸೆ ಇಲ್ಲದೇ ಇರುವುದರಿಂದ ನಮ್ಮ ದೊಡ್ಡಪ್ಪ ಬಸಪ್ಪನ ಮನೆಯಲ್ಲಿ ಮನೆ ಕಟ್ಟಿಕೊಳ್ಳುವವರೆಗೆ ವಾಸವಾಗಿದ್ದರು. ಮಲ್ಲೇಶಪ್ಪ ಎನ್ನುವವರಿಗೆ ಖಾಲಿ ಜಾಗ ಹಿಸ್ಸೆಗೆ

ಬಂದಿದ್ದು, ಅದರಲ್ಲಿ ಆತನು ಮನೆ ಕಟ್ಟಿಕೊಂಡಿದ್ದಾನೆ.

ನಮ್ಮ ತಾಯಿ ಸೀತಮ್ಮ ಈ ದಾವೆ ಸಲ್ಲಿಸಿದ ನಂತರ ಮೃತಪಟ್ಟಿದ್ದಾಳೆಂದರೆ ಸರಿ. ನಮ್ಮ ತಾಯಿಯ ತವರು ಮನೆ ಆಲದಕಟ್ಟೆ ಗ್ರಾಮ ಇರುತ್ತದೆ. ನಮ್ಮ ತಾಯಿಯ ಅಣ್ಣನ ಮಗ ಬಸವಣ್ಣಪ್ಪ ಎನ್ನುವವರಿಗೆ ಕೊಟ್ಟು ಮದುವೆ ಮಾಡಿಕೊಟ್ಟಿದ್ದಾರೆಂದರೆ ಸರಿ. ಆ ಕಾಲಕ್ಕೆ ನನ್ನ ಮಾವ ಮಹದೇವಪ್ಪ ಮತ್ತು ಅತ್ತೆ ಜೀವಂತ ಇರಲಿಲ್ಲ ಎಂದರೆ ಸರಿ. ನಾನೇ ಅವರ ಕುಟುಂಬಕ್ಕೆ ಹಿರಿಯ ಸೊಸೆ ಎಂದರೆ ಸರಿ. ನಾನು ಆ ಕುಟುಂಬದ ಹಿರಿಯ ಸೊಸೆ ಆಗಿರುವುದರಿಂದ ನನ್ನ ಮೇಲೆ ಬಹಳ ಜವಾಬ್ದಾರಿ ಇತ್ತು ಎಂದರೆ ಸರಿ. ನನ್ನ ಗಂಡನ ಮನೆಯಲ್ಲಿ ಕೊಡುವ, ತೆಗೆದುಕೊಳ್ಳುವ ಎಲ್ಲಾ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತಾ ಬಂದಿದ್ದೇನೆಂದರೆ ಸರಿ. ನನ್ನ ಮಗ ವರಧರಾಜನಿಗೆ 1 ನೇ ಪ್ರತಿವಾದಿಯ ಮಗಳಾದ ಆಶಾಳನ್ನು 2018 ರಲ್ಲಿ ಕೊಟ್ಟು ಮದುವೆ ಮಾಡಿದ್ದಾರೆಂದರೆ ಸರಿ. ನನಗೆ ಲೋಹಿತ ಎನ್ನುವ ಇನ್ನೊಬ್ಬ ಮಗನಿದ್ದಾನೆಂದರೆ ಸರಿ. ಆತನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾನೆಂದರೆ ಸರಿ. ನನ್ನ ಮಗ ಲೋಹಿತನಿಗೆ 1 ನೇ ಪ್ರತಿವಾದಿಯ ಮಗ ಉಮೇಶ್ ರೂ.5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದರೆ ಸರಿ. 3 ವರ್ಷಗಳ ಹಿಂದೆ ಕೊಟ್ಟಿದ್ದಾರೆಂದರೆ ಸರಿ. ರೂ.5 ಲಕ್ಷ ರೂಪಾಯಿಗಳನ್ನು 1 ನೇ ಪ್ರತಿವಾದಿಯ ಮಗ ಉಮೇಶ್ ಮರಳಿ ಕೊಡುವಂತೆ 3 ತಿಂಗಳ ಹಿಂದೆ ಕೇಳಿದ್ದಾನೆಂದರೆ ಸರಿ. ನನ್ನ ಮಗ ರೂ.5 ಲಕ್ಷ ರೂಪಾಯಿಗಳನ್ನು ಮರಳಿ ಕೊಟ್ಟಿರುವುದಿಲ್ಲ ಎಂದರೆ ಸರಿ. ನನ್ನ ಮಗ ಲೋಹಿತನಿಗೆ 1 ನೇ ಪ್ರತಿವಾದಿಯ ಮಗ ಉಮೇಶ್ ಮರಳಿ ಹಣ ಕೊಡುವಂತೆ ಕೇಳಿದ್ದರಿಂದ, ನಾನು ನನ್ನ ಮಗ ವರಧರಾಜ ಮತ್ತು ಆತನ ಹೆಂಡತಿ ಆಶಾಳನ್ನು ಮನೆಯಿಂದ ಹೊರಗೆ ಹಾಕಿದ್ದೇವೆಂದರೆ, ಸಾಕ್ಷಿಯು ನಾವೇ ಮನೆಯನ್ನು ಬಿಟ್ಟು ಹೋಗಿರುತ್ತೇವೆಂದು ಉತ್ತರಿಸುತ್ತಾರೆ. ನನ್ನ ಮಗ ವರಧರಾಜ ಮತ್ತು ಆತನ ಹೆಂಡತಿ ಇರುವ ಮನೆ ಬೇರೆ ಹಾಗೂ ನಾನು ಇರುವ ಮನೆ ಬೇರೆ ಎಂದರೆ ಸರಿ. ಸಾಕ್ಷಿಯು ಮಂದುವರೆದು ಈ ದಾವಾ ಸಲ್ಲಿಸಿದ್ದರಿಂದ ನಮ್ಮ ಮನೆಯಲ್ಲಿ ವ್ಯಾಜ್ಯ ಉಂಟಾಗಿದೆಂದು ಸ್ವಇಚ್ಛೆಯಿಂದ ಹೇಳುತ್ತಾರೆ. ನಾನು ವಾದಿಯ ಮಾತು ಕೇಳಿ, 1 ನೇ ಪ್ರತಿವಾದಿಯ ಮಗ ಉಮೇಶ್ ರೂ.5 ಲಕ್ಷ ರೂಪಾಯಿಗಳನ್ನು ಮರಳಿ ಕೊಡಬೇಕೆಂದು ಕೇಳಿದ್ದರಿಂದ, ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಯಿಸಿದ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಕಂಡಿಕೆ 8 ರಲ್ಲಿ ನನಗೆ ಕ್ಷೇತ್ರ 20 ಗುಂಟಾ ಜಾಗ ಬಂದಿದೆಂದು ಹೇಳಿ ಬರೆಯಿಸಿರುವುದಿಲ್ಲ. ಯಾರಿಗೆ ಹಿಸ್ಸೆ ಬಂದಿದೆಂದು ನನಗೆ ಗೊತ್ತಿಲ್ಲ. ಜಮೀನನ್ನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಕೋಡಿಹಳ್ಳಿ ಜಮೀನನ್ನು ಖರೀದಿಸುವಾಗ ನಾನು ಇರಲಿಲ್ಲ. ನಾನು ಕ್ರಯ ಪತ್ರವನ್ನು ನೋಡಿರುವುದಿಲ್ಲ. 1 ನೇ ಪ್ರತಿವಾದಿಗೆ ಸರ್ಕಾರದವರು ಕೊಟ್ಟ ಹಕ್ಕು ಪತ್ರವನ್ನು ನಾನು ನೋಡಿದ್ದೇನೆ. ಸದರಿ ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ, ನಾನು ಓದಲು ಬರುವುದಿಲ್ಲ

ಸದರಿ ನಿ.ಡಿ-1 ಹಕ್ಕು ಪತ್ರವನ್ನು 1 ನೇ ಪ್ರತಿವಾದಿ, ಅವರ ಮನೆಯಲ್ಲಿ ಫೋಟೋ ಮಾಡಿಸಿ ಹಾಕಿಕೊಂಡಿದ್ದಾನೆ. ಸರ್ವೆ ನಂಬರ್-29/ಪಿ ಕ್ಷೇತ್ರ 1 ಎಕರೆ 31 ಗುಂಟಾ ಜಮೀನನ್ನು ಮಾರಾಟ ಮಾಡಿದ ಬಗ್ಗೆ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಯಿಸಿರುವುದಿಲ್ಲ. ಕೋಡಿಹಳ್ಳಿ ಗ್ರಾಮದ ಜಮೀನಿನ ಮತ್ತು ಸರ್ಕಾರದವರು 1 ನೇ ಪ್ರತಿವಾದಿಗೆ ಮಂಜೂರು ಮಾಡಿದ ಜಾಗದ ಕುರಿತು, ನಮ್ಮ ತಂದೆಯಾಗಲೀ ಮತ್ತು ಆತನ ಸಹೋದರರಾಗಲೀ ಕಂದಾಯ ಪಾವತಿಸಿರುವುದಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇಲ್ಲದೇ ಇರುವುದರಿಂದ 1 ನೇ ಪ್ರತಿವಾದಿಗೆ ಸರ್ಕಾರದವರು ಜಾಗ ಕೊಟ್ಟಿದ್ದಾರೆಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿಗೆ ಸರ್ಕಾರದವರು ಜಾಗ ಮಂಜೂರು ಮಾಡಿದಾಗ ಆತನು ಸ್ವತಂತ್ರವಾಗಿ ವಾಸವಾಗಿದ್ದ ಎನ್ನುವುದು ಸರಿಯಲ್ಲ. 1980-81 ರಲ್ಲಿ 1 ನೇ ಪ್ರತಿವಾದಿ ಒಟ್ಟು ಕುಟುಂಬದಿಂದ ಹೊರಗೆ ಹೋಗಿ, ಪ್ರತ್ಯೇಖವಾಗಿ ವಾಸಿಸುತ್ತಿದ್ದಾನೆ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ಕುಟುಂಬದ ಮೇಲ್ವಿಚಾರಣೆ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿಯರು ಶಾಲೆಗೆ ಕೂಡಿ ಹೋಗುತ್ತಿದ್ದೇವು ಎನ್ನುವುದು ಸರಿಯಲ್ಲ. ನಿ.ಡಿ-46 ರ ಶಾಲಾ ದಾಖಲೆಯಲ್ಲಿ 1970-71 ರಲ್ಲಿ ಶಾಲೆಗೆ ದಾಖಲಾಗಿದ್ದೇನೆ ಎನ್ನುವುದು ಸರಿಯಲ್ಲ. ವಾದಿಯು ಸಹ ಅದೇ ಶಾಲೆಗೆ ಹೋಗುತ್ತಿದ್ದ ಎಂದರೆ ಸರಿ. ಉಳಿದ ನನ್ನ ಸಹೋದರಿಯರು ಅದೇ ಶಾಲೆಯಲ್ಲಿ ಕಲಿತಿದ್ದಾರೆಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿಗೆ ಮಂಜೂರಾದ ಜಾಗದ ಪೂರ್ವಾರ್ಧದಲ್ಲಿ ಸರ್ಕಾರದ ಅನುಧಾನ ಪಡೆದು 1 ನೇ ಪ್ರತಿವಾದಿಯ ಹೆಂಡತಿ ಅನುಸೂಯಮ್ಮ ಮನೆ ಕಟ್ಟಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಸರ್ಕಾರದವರು ಕೊಟ್ಟ ಜಾಗದಲ್ಲಿರುವ ಮನೆಗಳು 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿಯ ಹೆಸರಿನಲ್ಲಿವೆ ಎನ್ನುವುದು ಸರಿ. ಅಲಸಬಾಳು ಕೆಂಚಪ್ಪ ತಂದೆ ಮುರಿಗೆಪ್ಪ ಎಂದರೆ 1 ನೇ ಪ್ರತಿವಾದಿ ಇರುತ್ತಾರೆಂದರೆ ಸರಿ. 1 ನೇ ಪ್ರತಿವಾದಿ ತನ್ನ ಹೆಸರಿನಲ್ಲಿ ಮಂಜೂರಾದ ನಂತರ, ಆತನೇ ಕಂದಾಯ ಪಾವತಿಸಿದ್ದಾನೆಂದರೆ ಸಾಕ್ಷಿಯು, ಆತನು ಹಿರಿಯನಾಗಿದ್ದರಿಂದ ಪಾವತಿಸಿದ್ದಾನೆಂದು ಉತ್ತರಿಸುತ್ತಾರೆ. ಆತನು ಮಾಲೀಕನಾಗಿದ್ದರಿಂದ ಕಂದಾಯ ಪಾವತಿಸಿದ್ದಾನೆ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದ ಜಾಗದಲ್ಲಿ ತಮಗೂ ಹಿಸ್ಸೆ ಕೊಡಬೇಕೆಂದು, ನಮ್ಮ ತಂದೆ ಮತ್ತು ಆತನ ಸಹೋದರರು ಪಂಚಾಯಿತಿಗೆ ತಕರಾರನ್ನು ಸಲ್ಲಿಸಿರುವುದಿಲ್ಲ. ಇತ್ತೀಚಿಗೆ ನನಗೆ ಮತ್ತು 1 ನೇ ಪ್ರತಿವಾದಿಗೆ ವೈಮನಸ್ಸು ಬಂದಿದ್ದರಿಂದಾಗಿ, ನಾನು ಸಲ್ಲಿಸಿದ ಪ್ರತಿವಾದ ಪತ್ರಕ್ಕೆ ವ್ಯತಿರಿಕ್ತವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.